# ಪ್ರಿಯಾಂಕಾ ಫಾರ್ಮುಲಾ

ನಟಿ ಪ್ರಿಯಾಂಕಾ ತಿಮ್ಮೇಶ್, ಗ್ರಾಮೀಣ ಸೊಗಡಿನ ಸಿನಿಮಾವೊಂದರಲ್ಲಿ ನಟ ವಿಜಯ್ ರಾಘವೇಂದ್ರ ಅವರಿಗೆ ಜೋಡಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

'ರುದ್ರಾಭಿಷೇಕಂ' ಎಂಬ ಸಿನಿಮಾದಲ್ಲಿ ನಟಿಸುತ್ತಿದ್ದು, ಗ್ರಾಮೀಣ ಕರ್ನಾಟಕದ ಕಥೆ ಇದಾಗಿದೆ. ಸಾಂಪ್ರದಾಯಿಕ ವೀರಗಾಸೆ ನೃತ್ಯ ಪ್ರಕಾರದ ಕುರಿತ ಸಿನಿಮಾ ಇದಾಗಿದ್ದು, ಹಾರರ್ ಅಂಶಗಳೂ ಇದರಲ್ಲಿರುವುದಾಗಿ ಚಿತ್ರತಂಡ ಹೇಳಿಕೊಂಡಿದೆ.

ಈ ಸಿನಿಮಾ ಒಪ್ಪಲು ತಮಗಿರುವ ಕಾರಣಗಳನ್ನು ತೆರೆದಿಟ್ಟಿದ್ದಾರೆ ಪ್ರಿಯಾಂಕಾ. 'ನಮ್ಮ ನೆಲದ ಸಂಸ್ಕೃತಿಯ ಎಷ್ಟೋ ವಿಷಯಗಳನ್ನು ಇನ್ನೂ ಮುಟ್ಟಿಲ್ಲ. ಇದೇ 'ರುದ್ರಾಭಿಷೇಕಂ' ಸಿನಿಮಾದೆಡೆಗೆ ನನ್ನನ್ನು ಸೆಳೆದ ಅಂಶ. ಇದರಲ್ಲಿ ನಾನು ಹಳ್ಳಿ ಹುಡುಗಿಯಾಗಿ ಕಾಣಿಸಿಕೊಳ್ಳುತ್ತಿದ್ದೇನೆ. ಇದು ಸುಮ್ಮನೆ ಬಂದು ಹೋಗುವಂಥ ಪಾತ್ರವಲ್ಲ. ಕಥೆಗೆ ತಿರುವು, ರೋಚಕತೆ ಕೊಡುವಂಥ ಪಾತ್ರ. ಇದೇ ಮೊದಲ ಬಾರಿಗೆ ವಿಜಯ್ ರಾಘವೇಂದ್ರ ಅವರೊಂದಿಗೆ ನಟಿಸುತ್ತಿದ್ದೇನೆ. ಒಳ್ಳೆಯ ಅನುಭವ ದಕ್ಕುವ ಭರವಸೆಯಿದೆ' ಎಂದು ಹೇಳಿದ್ದಾರೆ.

ಪಾತ್ರದ ಆಯ್ಕೆಯಲ್ಲಿ ತಮ್ಮದೇ ಫಾರ್ಮುಲಾ ಅನುಸರಿಸುವ ಪ್ರಿಯಾಂಕಾ, 'ನಾನೇ ಪಾತ್ರಗಳ ಹಿಂದೆ ಹೋಗುವುದಕ್ಕಿಂತ ಸ್ಕ್ರಿಪ್ಟ್ ನನ್ನನ್ನು ಆಯ್ಕೆ ಮಾಡಬೇಕು ಎಂಬ ಅಂಶವನ್ನು ನಂಬುತ್ತೇನೆ. ನನ್ನ ಇದುವರೆಗಿನ ಸಿನಿಮಾ ಪಯಣದಲ್ಲಿ ಕೆಲವೇ ಸಿನಿಮಾಗಳನ್ನು ಮಾಡಲು ಇದೂ ಒಂದು ಕಾರಣ. ನಾನು ಪ್ರತಿನಿಧಿಸುವ ಪಾತ್ರಗಳ ಕುರಿತು ಜಾಗ್ರತಳಾಗಿರುತ್ತೇನೆ. ಸುಮ್ಮನೆ ಸಿನಿಮಾ ಸಂಖ್ಯೆಗಳನ್ನು ಹೆಚ್ಚಿಸಿಕೊಳ್ಳಬೇಕೆಂಬ ಆಸೆಯಿಲ್ಲ. ನನ್ನ ಪಾತ್ರಗಳು ಜನ ನೆನಪಿಟ್ಟುಕೊಳ್ಳುವಂಥವಾಗಬೇಕು' ಎಂದಿದ್ದಾರೆ.

ಸಿನಿಮಾದಲ್ಲಿ ಯಶಸ್ಸು ಕಾಣಲು ವಿಶಿಷ್ಟ ಪಾತ್ರಗಳು ಎಂದೇನೂ ಇರುವುದಿಲ್ಲ. ಬಾಕ್ಸ್ ಆಫೀಸ್ ಹಿಟ್‌ಗೆ ಜೋತು ಬೀಳಲು ನಾನು ಇಷ್ಟಪಡುವುದಿಲ್ಲ. ಅದರ ಬದಲಿಗೆ ನನಗೆ ತೃಪ್ತಿ ನೀಡುವಂಥ ಪಾತ್ರಗಳತ್ತ ಗಮನನೀಡುತ್ತೇನೆ ಎಂದಿರುವ ಅವರು, 'ಕುಟೀರ' ಸಿನಿಮಾದಲ್ಲಿ ನಟ ಕೋಮಲ್ ಜೊತೆಯೂ ನಟಿಸುತ್ತಿದ್ದಾರೆ. 'ಒಬ್ಬ ನಟಿಯಾಗಿ ಬೆಳವಣಿಗೆ ಹೊಂದಲು ಸಹಾಯ ಮಾಡುವ ಅವಕಾಶವನ್ನು ನಾನು ಇಷ್ಟಪಟ್ಟು ಸ್ವೀಕರಿಸುತ್ತೇನೆ' ಎಂದು ಹೇಳುತ್ತಾರೆ. ■





# ಸಿನಿಮಾ ಟ್ರೆಂಡ್ ಬಗ್ಗೆ ರಿಷಿ ಮಾತು

'ಸಾಂಸ್ಕೃತಿಕ ಬೇರಿನ ಸಿನಿಮಾಗಳು ಈಗ ಟ್ರೆಂಡ್‌ನಲ್ಲಿರುವಂತಿವೆ. ತಮ್ಮ ಹಾಗೂ ತಮ್ಮ ಸುತ್ತಲಿನ ಜನರ ಅನುಭವವನ್ನು ಆಧರಿಸಿ ಬರಹಗಾರರು ಹಾಗೂ ನಿರ್ದೇಶಕರು ಕಥೆ ಆರಿಸುವುದು ಸಹಜವಾಗಿದೆ. ಇಂಥ ವಿಶಿಷ್ಟ ಕಥೆಗಳು ಸಿನಿಮಾ ಮೇಕಿಂಗ್‌ನಲ್ಲಿ ತೊಡಗಿಕೊಂಡವರಿಗೆ ಆತ್ಮವಿಶ್ವಾಸ ನೀಡುತ್ತಿವೆ. ಇಂಥ ಮೂಲ ಹಾಗೂ ಒರಿಜಿನಲ್ ಕಥೆಯನ್ನು ಜನರು ಕೂಡ ಇಷ್ಟಪಡುತ್ತಿದ್ದಾರೆ. ಸಿನಿಮಾ ಮೂಲಕ ಭಿನ್ನ ಸಂಸ್ಕೃತಿಯನ್ನು ನೋಡುವುದರಲ್ಲಿ ಜನರು ಆಸಕ್ತರಾಗಿದ್ದಾರೆ' ಎಂದು ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ ನಟ ರಿಷಿ.

ಈಚೆಗೆ 'ಮಂಗಳಾಪುರಂ' ಸಿನಿಮಾ ಘೋಷಣೆ ಆಗಿದ್ದು, ಅದರಲ್ಲಿ ನಟ ರಿಷಿ ತೊಡಗಿಕೊಂಡಿದ್ದಾರೆ. ಇದೇ ಸಂದರ್ಭ ಸಿನಿಮಾಗಳ ಬದಲಾಗುತ್ತಿರುವ ಟ್ರೆಂಡ್ ಕುರಿತು ಮಾತನಾಡಿದ್ದಾರೆ.

'ಒಂದು ಸಿನಿಮಾ ಯಾವಾಗಲೂ ಕಮರ್ಷಿಯಲ್ ಆಗಿರಲೇಬೇಕಿಲ್ಲ. ಪ್ರೇಕ್ಷಕರನ್ನು ತಲುಪಲು ಕಥೆಯೊಂದು ಸರಿಯಾಗಿ ಅನುಷ್ಠಾನಗೊಂಡರೆ ಅದು ಗೆಲ್ಲುತ್ತದೆ, ಹಣ ಮಾಡುತ್ತದೆ ಕೂಡ' ಎಂದು ಹೇಳಿದ್ದಾರೆ.

'ಮಂಗಳಾಪುರಂ' ಸಿನಿಮಾ ಕುರಿತು ಮಾತನಾಡಿರುವ ಅವರು, 'ಒಂದು ನಗರದ, ಅದರ ಸಂಸ್ಕೃತಿಯ, ನಂಬಿಕೆಗಳ ಕುರಿತ ಕಥೆ ಇದು. ಸಿನಿಮಾ ನಿರ್ದೇಶಕ ರಂಜಿನ್ ರಾಜ್ ಸುವರ್ಣ ಮಂಗಳೂರಿನವರಾಗಿದ್ದು, ಅವರ ತಾಯ್ನೆಲದ ಕಥೆ ದೊಡ್ಡ ಮಟ್ಟದಲ್ಲಿ ಪ್ರೇಕ್ಷಕರನ್ನು ಮುಟ್ಟಬೇಕು ಎಂದು ಹಂಬಲಿಸಿದ್ದಾರೆ. ಪ್ರೇಕ್ಷಕರನ್ನು ಎಂದಿಗೂ ಸುಲಭವಾಗಿ ತೆಗೆದುಕೊಳ್ಳಬಾರದು. ಸಂಸ್ಕೃತಿಯ ಕಥೆಯನ್ನು ಹೇಳುವಾಗ ಪ್ರತಿಯೊಂದೂ ನಿಖರವಾಗಿರಬೇಕು ಎಂಬ ತಿಳಿವಿನೊಂದಿಗೆ ಕಥೆಯಲ್ಲಿ ತೊಡಗಿಕೊಂಡಿದ್ದೇವೆ' ಎಂಬುದನ್ನು ಒತ್ತಿ ಹೇಳಿದ್ದಾರೆ. ■